ತಾಯಿಯ ಬಳಿ ಹೇಳಬೇಕೆಂದುಕೊಂಡರೂ ಧೈರ್ಯ ಸಾಲದೆ ಅದೇ ಖಿನ್ನತೆಯ ಗೂಡಿನೊಳಗೆ ಸೇರಿಕೊಂಡು ಕತ್ತಲ ಮೂಲೆಯಲ್ಲಿ ಮುದುಡಿಕೊಳ್ಳುತ್ತಿದ್ದಳು. ಏನಾದರೂ ಕೆಲಸ ಮಾಡಿಸಬೇಕಾದಲ್ಲಿ ಅವಳ ತಾಯಿ ಬೈದು ಹೊಡೆದು ಮಾಡಿಸುವ ಹಂತಕ್ಕೆ ಮುಟ್ಟಿತ್ತು. ಯಾರಿಗೂ ಅವಳ್ಯಾಕೆ ಹಾಗೆ ಆದಳೆಂಬುದುರ ಬಗ್ಗೆ ಯೋಚಿಸುವಷ್ಟೂ ಸಮಯವಿಲ್ಲದಂತೆ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು. ಅವಳ ಚಿಕ್ಕಪ್ಪನು ಮಾತ್ರ ದುರುಗುಟ್ಟಿ ನೋಡುತ್ತಾ ಹೆದರಿಸುವುದು ಮುಂದುವರೆದೇ ಇತ್ತು. ಮತ್ತು ಅವಕಾಶ ಸಿಕ್ಕಾಗ ಒಂದೆರಡು ಬಾರಿ ಮತ್ತೆ ಮೇಲೆರಗಿ ತನ್ನ ಆಸೆಯನ್ನು ತೀರಿಸಿಕೊಂಡಿದ್ದ. ಹೀಗೆಯೇ ಅವಳು ವಯಸ್ಸಿಗೆ ಬಂದು ನಿಂತಳು. ಆಗ ಅವಳ ಚಿಕ್ಕಪ್ಪನ ಉಮೇದು ದುಪ್ಪಟ್ಟುಗೊಂಡಿತು. ದಿನಕ್ಕೆ ಆರು ಬಾರಿ ತಿನ್ನುವವನಂತೆ ಕಸುವನ್ನು ತುಂಬಿಕೊಂಡು ಓಡಾಡಲು ಶುರುಮಾಡಿದ. ಒಂದು ದಿನ ರಂಗಜ್ಜಿಯ ತಂದೆ ತನ್ನ ತಮ್ಮನಿಗೆ ಮನೆಯ ಮುಂದೆ ಕೆಡವಿಕೊಂಡು ಕಣದಲ್ಲಿ ಹುರಳಿಗೆ ಹೊಡೆಯಲು ಇಟ್ಟಿದ್ದ ದೊಣ್ಣೆಯಿಂದ ಬಡಿಯುತ್ತಲಿದ್ದ. ಊರವರು ಬಂದು ಬಿಡಿಸಿ ಪಂಚಾಯತಿ ಮಾಡಿದ್ದೂ ಆಯಿತು. ಪಂಚಾಯತಿಯಲ್ಲಿ ರಂಗಜ್ಜಿಯ ತಂದೆ ಪದೇಪದೆ ಹೇಳಿದ್ದು ಒಂದೇ ಮಾತು 'ಅವನು ನಮ್ಮೂರ್ನಾಗ ಪಕ್ಕದೂರ್ನಾಗ ಗೂಳಿಯಂಗೆ ವೋಡಾಡ್ಕಂಡು ನನ್ನ ಮಾನ ಹರಾಜಾಕ್ತಾವ್ನೆ' ಎಂದು. ಅದೇ ಪಂಚಾಯತಿಯ ಮುಂದೆ ಅಂದೇ ಅವರಿಬ್ಬರೂ ಭಾಗ ಇಟ್ಟುಕೊಂಡು ತಮ್ಮ ತಮ್ಮ ಟವೆಲ್ಲುಗಳನ್ನು ಒದರಿ ಬುಸುಗುಡುತ್ತಾ ಮನೆಗೆ ನಡೆದಿದ್ದರು. ಮಾರನೆಯ ದಿನವೇ ರಂಗಜ್ಜಿಯ ತಂದೆ-ತಾಯಿ ಇರುವ ಒಬ್ಬಳೇ ಮಗಳ ಜೊತೆ ಬಂದ ಪಾಲನ್ನು ಹೊತ್ತು ಈಗ ಅವಳು ಹಾಸಿಗೆ ಹಿಡಿದಿರುವ ಮನೆಗೆ ಬಂದದ್ದು. ಅದಾದ ಒಂದೇ ತಿಂಗಳಿಗೆ ದೂರದ ವೇಮಗಲ್ ಬಳಿಯ ಕೃಷ್ಣಾಪುರದ ತಿಮ್ಮರಾಯರೆಡ್ಡಿಗೆ ಅವಳನ್ನು ಕೊಟ್ಟು ಮದುವೆ ಮಾಡಿದ್ದು.

ರಂಗಜ್ಜಿ ಸಂಭ್ರಮದಲ್ಲೆ ಗಂಡನ ಮನೆಯನ್ನು ಹೊಕ್ಕಿದ್ದಳು. ಎಲ್ಲ ಹೆಣ್ಣುಗಳಿಗೆ ಇರುವಂತೆ ಅವಳಿಗೂ ನಿರೀಕ್ಷೆಗಳು, ಕನಸುಗಳು ಹಲವಾರಿದ್ದವು. ನಾಚಿಕೆ ಸ್ವಭಾವದ ತಿಮ್ಮರಾಯ ತಂದೆ ತಾಯಿ ಹೇಳಿದಂತೆ ನಡೆದುಕೊಳ್ಳುತ್ತಾ ಅವಳ ನಿರೀಕ್ಷೆಗಳಿಗೂ ಹತ್ತಿರವಾಗುತ್ತಲಿದ್ದ. ರಾತ್ರಿಯ ಏಕಾಂತಗಳಲ್ಲಿ ಕತ್ತಲೆಯ ಸೊಗಸನ್ನು ಮತ್ತು ಅದು ಹೊಂದಿರಬಹುದಾದ ಜಾದೂ ಕಲೆಯನ್ನು ರಂಗಜ್ಜಿಗೂ ತೋರಿಸುತ್ತಾ ಅವನೂ ಕಲಿಯುತ್ತಾ ಬೆಳೆಯುತ್ತಲಿದ್ದ. ಶುರುವಿನಲ್ಲಿ ಅವಳಿಗೆ ಚಿಕ್ಕಪ್ಪನ ಮುಖ ಮುಂದೆ ಬಂದು ತುಸು ಹಿಂಜರಿಯುತ್ತಲಿದ್ದಳು. ಆಗೆಲ್ಲ ಅವಳು ತಿಮ್ಮರಾಯನ ಎದೆಗೆ ಜಾರಿ ಎಲ್ಲವನ್ನೂ ಮರೆಯುತ್ತಿದ್ದಳು. ಹಾಗೆಯೇ ದಿನಗಳು ಕಳೆದಂತೆ ಫಲವತಿಯಾದ ಅವಳು ರೂಢಿಯಂತೆ ತವರುಮನೆ ಸೇರಿಕೊಂಡಳು. ಸಮಯ ಸಿಕ್ಕಾಗಲೆಲ್ಲ ತಿಮ್ಮರಾಯ ಕಲ್ಲೂರಿಗೆ ಬಂದು ಹೆಂಡತಿಯನ್ನು ಕಂಡು ಮಾತಾಡಿಸಿ ಮುದಗೊಳ್ಳುತ್ತಲಿದ್ದ. ಹಾಗೆಯೇ ಹೆಂಡತಿಯನ್ನೂ ಮುದಗೊಳಿಸುತ್ತಲಿದ್ದ. ಒಂದು ಮುಂಜಾನೆ ಅವಳು ಹೆಣ್ಣುಮಗುವಿಗೂ ಜನ್ಮವಿತ್ತಳು. ನಂತರ ತಿಮ್ಮರಾಯನಿಗಾಗಿ ಕಾತುರದಲ್ಲಿ ಎದುರುನೋಡತೊಡಗಿದಳು. ಆ ದಿನ ಕಳೆದು ಮರುದಿನವೂ ಬಂದಿತು. ಏನೋ ಮುಖ್ಯವಾದ ಕೆಲಸ ಹಿಡಿದಿರಬಹುದು; ನಾಳೆ ಬರಬಹುದು ಎಂದು ದಿನಗಳನ್ನು ತಳ್ಳತೊಡಗಿದಳು. ಮತ್ತೂ ಮೂರು ವಾರಗಳು ಹಿಂದಕ್ಕೆ ಸರಿದವು. ತಿಮ್ಮರಾಯನಾಗಲಿ ಅವನ ಮನೆಯವರಾಗಲಿ ತಾಯಿ ಮಗುವನ್ನು ನೋಡುವ ಉಮೇದನ್ನು ತೋರಿಸುವ ಕಾಳಜಿ ವಹಿಸದೆ ತೆಪ್ಪಗಿದ್ದುಬಿಟ್ಟರು. ನಿಧಾನಕ್ಕೆ ಅವಳ ಕಂಗಳಲ್ಲಿ ನೀರು ಜಿನುಗಲು ಶುರುವಿಟ್ಟುಕೊಂಡಿತು. ರಂಗಜ್ಜಿಯ ತಾಯಿ ಹೆಣ್ಣುಮಗು ಹುಟ್ಟಿರುವುದಕ್ಕೆ ಮುನಿಸಿಕೊಂಡಿರಬಹುದು... ಮುಂದೆ ಎಲ್ಲವೂ ಸರಿಹೋಗಲಿದೆ ಸುಮ್ಮನಿರು ಎನ್ನುವಂತೆ ಸಮಾಧಾನದ ಮಾತನ್ನಾಡಿದ್ದಳು. ಆದರೆ ನಿಧಾನಕ್ಕೆ ಅವಳರಿವಿಗೆ ಬಂದದ್ದೆಂದರೆ ಮದುವೆಯಾಗಿ ಎಂಟು ತಿಂಗಳಿಗೇ ಹೆಣ್ಣು ಹೆತ್ತವಳು ತಮಗೆ ಬೇಡ ಎಂದು ತಿಮ್ಮರಾಯನ ಮನೆಯವರು ತೀರ್ಮಾನಿಸಿರುವ ವಿಷಯ. ಅದು ಅವಳನ್ನು ತನ್ನ ಚಿಕ್ಕಪ್ಪ ಗಾಸಿಗೊಳಿಸಿದ್ದಕ್ಕಿಂತ ಹೆಚ್ಚಿಗೆ ಹಿಂಸಿಸತೊಡಗಿತು.

ತಿಮ್ಮರಾಯನ ಜೊತೆ ಒಮ್ಮೆಯಾದರು ಮಾತನಾಡಬೇಕನಿಸಿತು. ಅದನ್ನು ತಾಯಿಯಲ್ಲೂ ಹೇಳಿದಳು. ಅವಳ ತಂದೆ ಒಂದಷ್ಟು ಜನರ ಕೈಯಲ್ಲಿ ಹೇಳಿಕಳಿಸಿದರೂ ಪ್ರಯೋಜನವಾಗಿರಲಿಲ್ಲ. ಖುದ್ದು